**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.1835/2025</u>**

| | | |
|---|---|---|
| ಸಾಕ್ಷಿದಾರರ ಹೆಸರು | : ತಿಮ್ಮಪ್ಪ ಡಿ.ಎಸ್. | ಫ್ರಾಸಾ-2 |
| ತಂದೆಯ ಹೆಸರು | : ಸಂಗಪ್ಪ | ಚಾಸಾ-4 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಎ.ಎಸ್.ಐ | ದಿನಾಂಕಃ18.12.2025. |
| ವಾಸಸ್ಥಳ | : ಮೂಡಿಗೆರೆ ಪೋಲಿಸ್ ಠಾಣೆ. | |

**<u>:ಮುಖ್ಯ ವಿಚಾರಣೆಃ ಫ್ರಾಭ್ಯಾ.ಸ.ಸ.ಅ. ರವರಿಂದ:</u>**

ನಾನು ದಿ.01.02.2021 ರಿಂದ ಇಲ್ಲಿಯವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.23.05.2025 ರಂದು ಬೆ.11.30 ರ ಸಮಯಕ್ಕೆ ನಾನು ಠಾಣೆಯಲ್ಲಿ ಇರುವಾಗ ಬಿಳುಗುಳ ಗ್ರಾಮದ ಇಂದಿರಾ ನಗರದ ಬಬ್ಬುಸ್ವಾಮಿ ದೇವಸ್ಥಾನದ ಬಳಿ ಇರುವ ವಿಠಲ ಪೂಜಾರಿರವರ ಮನೆಯ ಮುಂಭಾಗ 1 ನೇ ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾ-1 ರವರಿಗೆ ಮಾಹಿತಿ ಬಂದಿರುವುದಾಗಿ ನನ್ನನ್ನು ಮತ್ತು ಚಾಸಾ-5 ರಿಂದ 8 ರವರನ್ನು ಅವರೊಂದಿಗೆ ಠಾಣೆಯಿಂದ ಕರೆದುಕೊಂಡು ಹೊರಟು ಬೆ.11.50 ರ ಸಮಯಕ್ಕೆ ಬಿಳುಗುಳ ಗ್ರಾಮ ತಲುಪಿ ಅಲ್ಲಿ ಹಾಜರುಸಿಕ್ಕ ಚಾಸಾ-2 ಮತ್ತು 3 ರವರನ್ನು ನಿಯಮಾನುಸಾರ ಪಂಚರನ್ನಾಗಿಸಿಕೊಂಡು ಸದರಿರವರನ್ನು ನಮ್ಮೊಂದಿಗೆ ಕರೆದುಕೊಂಡು ಮ.12.00 ಗಂಟೆಗೆ ಮಾಹಿತಿ ಇದ್ದ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ 1 ನೇ ಆರೋಪಿಯು ಒಂದು ಚೀಲದಲ್ಲಿ ಮದ್ಯದ ಪ್ಯಾಕೇಟ್ ಗಳನ್ನು ಹಿಡಿದುಕೊಂಡು ನಿಂತಿರುವುದು ಕಂಡುಬಂತು. ಸದರಿ ವ್ಯಕ್ತಿಯು ಇಲಾಖಾ ವಾಹನವನ್ನು ನೋಡಿದ ಕೂಡಲೇ ಓಡಿಹೋಗಲು ಪ್ರಯತ್ನಿಸಿದ್ದು, ಚಾಸಾ-5 ಮತ್ತು 7 ರವರು ಅವರನ್ನು ಹಿಡಿದು ನನ್ನ ಸಮಕ್ಷಮ ಹಾಜರುಪಡಿಸಿದಾಗ ಚಾಸಾ-1 ರವರು 1 ನೇ ಆರೋಪಿಯ ಹೆಸರು ಮತ್ತು ವಿಳಾಸ ತಿಳಿದುಕೊಂಡು ತನ್ನ ಕೈಯಲ್ಲಿ ಇದ್ದ ಚೀಲದಲ್ಲಿ ಏನಿದೆ ಎಂದು ಕೇಳಿದಾಗ ಅದರಲ್ಲಿ ಮದ್ಯದ ಪ್ಯಾಕೇಟ್ ಗಳು ಇರುವುದಾಗಿ ಹಾಗೂ ಅವುಗಳನ್ನು ಯಾವುದೇ ಪರವಾನಗೆ ಇಲ್ಲದೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ.

ನಂತರ ಆರೋಪಿಯ ಕೈಯಲ್ಲಿ ಇದ್ದ ಚೀಲವನ್ನು ಪರಿಶೀಲಿಸಿ ನೋಡಿದಾಗ ಅದರಲ್ಲಿ 90 ಎಂ.ಎಲ್. ನಷ್ಟು ಮದ್ಯ ತಂಬಿದ Mecdowel ನ 13 ಟೆಟ್ರಪ್ಯಾಕ್ ಗಳು, 90 ಎಂ.ಎಲ್. ನಷ್ಟು ಮದ್ಯ ತಂಬಿದ original choice ನ 14 ಟೆಟ್ರಪ್ಯಾಕ್ ಗಳು, 90 ಎಂ.ಎಲ್. ನಷ್ಟು ಮದ್ಯ ತಂಬಿದ 8-PM ನ 5 ಟೆಟ್ರಪ್ಯಾಕ್ ಗಳು ಇದ್ದವು. ಮದ್ಯದ ಪ್ಯಾಕೇಟ್ ಗಳು ಇದ್ದ ಚೀಲದ ಮೇಲೆ ಪೂಜಾ ಪ್ಯಾಷನ್ಸ್ ಎಂದು ಆಂಗ್ಲಭಾಷೆಯಲ್ಲಿ ಬರೆಯಲಾಗಿತ್ತು. ಸದರಿ ವಸ್ತುಗಳನ್ನು ನಿಯಮಾನುಸಾರ ಪ್ರತ್ಯೇಕವಾಗಿ ಸೀಲು ಮಾಡಿ ಪಂಚರ ಸಮಕ್ಷಮ ಮ.12.05 ರಿಂದ 12.55 ರವರೆಗೂ ಮಹಜರ್ ಬರೆದು ಪೋಟೋ ತೆಗೆಸಿ ವಶಕ್ಕೆ

ಪಡೆಯಲಾಯಿತು. ಮಹಜರ್ ನ್ನು ಚಾಸಾ-1 ರವರ ಉಕ್ತಲೇಖದಂತೆ ನಾನು ಬರೆದಿರುತ್ತೇನೆ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-3 ಫೋಟೋವನ್ನು ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಹಾಗೂ ಎಂ.ಒ.1 ರಿಂದ 4 ರ ವಸ್ತುಗಳನ್ನು 1 ನೇ ಆರೋಪಿಯ ಸ್ವಾಧೀನದಿಂದ ವಶಕ್ಕೆ ಪಡೆದ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಗಳನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. 1 ನೇ ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ</u>

ಮದ್ಯದ ಪ್ಯಾಕೇಟ್ ಗಳ ಮೇಲೆ ಇದ್ದ ತಯಾರಿಕಾ ದಿನಾಂಕಗಳು ಈಗ ನನಗೆ ನೆನಪಿಲ್ಲ. ವಶಕ್ಕೆ ಪಡೆಯಲಾಯಿತು ಎಂದು ಹೇಳಲಾದ ಎಲ್ಲಾ ಟೆಟ್ರಪ್ಯಾಕ್ ಗಳ ಮೇಲೆ ತಯಾರಿಕಾ ದಿನಾಂಕ ಇತ್ತ ಎಂದು ಈಗ ನನಗೆ ನೆನಪಿಲ್ಲ. ಮಹಜರ್ ನಲ್ಲಿ ಟೆಟ್ರಪ್ಯಾಕ್ ಗಳ ತಯಾರಿಕಾ ದಿನಾಂಕ ನಮೂದಿಸಲಾಗಿದೆ. ಸಾಕ್ಷಿಗೆ ಎಂ.ಒ.4 ರ ಪೈಕಿ 8-PM ಕಂಪೆನಿಯ ಟೆಟ್ರಪ್ಯಾಕ್ ನ್ನು ತೋರಿಸಿ ಅದರ ಮೇಲೆ ತಯಾರಿಕಾ ದಿನಾಂಕದ ಇಸವಿಯು ಸರಿಯಾಗಿ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಒಪ್ಪುತ್ತಾರೆ. ಎಂ.ಒ.4 ರಂತಹ ಟೆಟ್ರಪ್ಯಾಕ್ ಗಳು ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳು ಸಿಕ್ಕ ಸ್ಥಳದಲ್ಲಿ ಫೋಟೋ ತೆಗೆಯಬೇಕು ಎಂದರೆ ಸರಿ. ನಿಪಿ-3 ರಲ್ಲಿ ಕಟ್ಟೆ ಕಾಣುತ್ತಿಲ್ಲ ಅದು ನೆಲಹಾಸು ಎಂದರೆ ಸರಿಯಲ್ಲ. ನಿಪಿ-3 ನ್ನು ಪ್ರಕಣಕ್ಕೋಸ್ಕರ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿದ ದಿನಾಂಕ ಬೆಳಗ್ಗೆ 11.50 ರ ಸಮಯಕ್ಕೆ ಠಾಣೆಗೆಯಿಂದ ಸ್ಥಳಕ್ಕೆ ಹೊರಟೆವು. ಠಾಣೆಯಿಂದ ಕೃತ್ಯ ನಡೆದಿದೆ ಎಂದು ಹೇಳಲಾದ ಸ್ಥಳಕ್ಕೆ ಹೋಗಲು 10 ನಿಮಿಷಗಳ ಕಾಲ ಬೇಕು.

ಪಂಚರನ್ನು ಬರಮಾಡಿಕೊಂಡಾಗ ಬೆ.11.50 ರ ಸಮಯವಾಗಿತ್ತು. ಆ ಸ್ಥಳದಿಂದ ಕೃತ್ಯ ನಡೆದ ಸ್ಥಳಕ್ಕೆ 200 ಮೀಟರ್ ಅಂತರ ಇತ್ತು. ದಾಳಿ ಕಾಲಕ್ಕೆ ಯಾವುದೇ ಗ್ರಾಹಕರು ಕಂಡುಬಾರಲಿಲ್ಲ. 1 ನೇ ಆರೋಪಿಯಿಂದ ನಗದು ಹಣ ವಶಕ್ಕೆ ಪಡಯಲಾಗಿಲ್ಲ. 1 ನೇ ಆರೋಪಿಯು ಅಕ್ರಮವಾಗಿ ಮದ್ಯಮಾರಾಟ ಮಾಡುತ್ತಿದ್ದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಪಿ-1 ರಿಂದ 10 ರ ದಾಖಲೆಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಮಹಜರ್ ಬರೆದ ಸ್ಥಳದ ಪೂರ್ವಕ್ಕೆ ಮಂಜುಳರವರ ವಾಸದ ಮನೆ, ಪಶ್ಚಿಮಕ್ಕೆ ಸಿಮೆಂಟ್ ರಸ್ತೆ, ಉತ್ತರಕ್ಕೆ ದೇವಸ್ಥಾನ ಮತ್ತು ವಿಠಲ ಪೂಜಾರಿರವರ ಮನೆ, ದಕ್ಷಿಣಕ್ಕೆ ಮಧು ರವರ ಮನೆ ಇತ್ತು. ಮೇಲೆ ಹೇಳಿದ ಸ್ಥಳಗಳು ಫೋಟೋದಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ನಾನು ಹೇಳಿದ ದಿನಾಂಕದಂದು ವಿಠಲ ಪೂಜಾರಿರವರ ಹೇಳಿಕೆ ಪಡೆದುಕೊಂಡಿಲ್ಲ. ಆ ದಿನ ವಿಠಲ ಪೂಜಾರಿರವರ ಮನೆ ದಾಖಲೆಗಳನ್ನು ನಾನು ಪರಿಶೀಲಿಸಿರಲಿಲ್ಲ.

ವಿಠಲ ಪೂಜಾರಿರವರ ಮನೆಯ ಮುಂದೆ ಮದ್ಯದ ವಸ್ತುಗಳು ಸಿಕ್ಕಿದ್ದಾವೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಮತ್ತು

ವೀಡಿಯೋಗಳನ್ನು ಪ್ರಕರಣಕ್ಕೆ ಉಪಯೋಗವಾಗುಂವತೆ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ನಮ್ಮ ಇಲಾಖಾ ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ, ಮುದ್ದೆಮಾಲುಗಳಿಗೂ, ಈ ಪ್ರಕರಣಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.